## ಪ್ಯಾರೋಟ್ ಪ್ಲ್ಯಾನ್ಟ್

ಪ್ಯಾರೋಟ್ ಪ್ಲ್ಯಾನ್ಟ್‌ನ ವೈಜ್ಞಾನಿಕ ಹೆಸರು ಇಂಪೈಟಿಯನ್ಸ್ ಸಿಟ್ಟಾಸಿನಾ. ಈ ಸಸ್ಯ 60–90 ಸೆಂಟಿಮೀಟರ್ ಉದ್ದ ಬೆಳೆಯುತ್ತದೆ. ಈ ಸಸ್ಯವು ಪ್ರಕಾಶಮಾನವಾದ ಮತ್ತು ವರ್ಣರಂಜಿತ ಗಿಳಿ–ಆಕಾರದ ಹೂವುಗಳನ್ನು ಬಿಡುತ್ತದೆ (ಆದ್ದರಿಂದ ಗಿಳಿ ಸಸ್ಯ ಎಂದು ಕರೆಯಲ್ಪಡುತ್ತದೆ).

ಗಿಳಿ ಸಸ್ಯದ ಹೂವುಗಳು ಗಿಳಿಯಂತೆ ಗೋಚರಿಸುವದರಿಂದ ಅವುಗಳ ಬೇಡಿಕೆ ಮಾರುಕಟ್ಟೆಯಲ್ಲಿ ಹೆಚ್ಚಾಗುತ್ತಿದೆ. ಈ ಸಸ್ಯ ಅಪರೂಪ. ಗಿಳಿಹೂವುಗಳ ಸೌಂದರ್ಯಕ್ಕೆ ಜನರು ಮಾರುಹೋಗುತ್ತಿದ್ದಾರೆ. ಏಷ್ಯಾದ ವಿವಿಧ ದೇಶಗಳಲ್ಲಿ ಈ ಹೂವು ಕಂಡುಬರುತ್ತದೆ ಎಂದು ಹೇಳಲಾಗಿದ್ದರೂ, ಇದು ಪ್ರಧಾನವಾಗಿ ಥೈಲ್ಯಾಂಡ್‌ನ ಉಷ್ಣವಲಯದ ಕಾಡುಗಳಲ್ಲಿ ಹೆಚ್ಚಿದೆ ಎನ್ನಲಾಗುತ್ತದೆ. ಅದಕ್ಕೆ ಥೈಲ್ಯಾಂಡ್ ಇದನ್ನು ಸಂರಕ್ಷಿತ ಪ್ರಭೇದವೆಂದು ಘೋಷಿಸಿದೆ. ಗಿಳಿ ಸಸ್ಯದ ಹೂಗಳು ಪ್ರಕಾಶಮಾನವಾದ ಕಿತ್ತಳೆಕೆಂಪು ಮತ್ತು ಹಳದಿ ಬಣ್ಣದಾಗಿರುತ್ತವೆ. ಭಾರತದ ಕೆಲವು ಭಾಗಗಳಲ್ಲಿ ಕಂಡುಬರುತ್ತಿದೆ.

–ವಿಜಯಕುಮಾರ್ ಎಚ್.ಕೆ.





## ಅಣಬೆ ಮರ!

ಸತ್ತ ಮರದ ಸುತ್ತಲೂ ಹಣತೆಯಂತೆ ಮೇಲೆದ್ದ ಈ ಆಕರ್ಷಕ ಅಣಬೆಗಳು ಸತ್ತ ಮರವನ್ನೇ ಜೀವಂತಗೊಳಿಸಿದಂತೆ ಗೋಚರಿಸುತ್ತದೆ. ಈ ಸತ್ತ ಮರದ ಸುತ್ತಲೂ ಹಣತೆ ಅಣಬೆಗಳು ಒಂದಲ್ಲ, ಎರಡಲ್ಲ ನೂರಾರು. ಈ ಆಕರ್ಷಕ ಅಣಬೆ ಮರವನ್ನು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಬಳಿಯ ಕೋಲಸಿರ್ಸಿ ಕಾಡಿನಲ್ಲಿ ವಿಠ್ಠಲ ಭಂಡಾರಿಯವರು ಸೆರೆ ಹಿಡಿದಿದ್ದರು. ಇತ್ತೀಚೆಗೆ ಅವರು ಕೊರೊನಾಕ್ಕೆ ಬಲಿಯಾದರು. ಸಮಾಜ ಮುಖಿಯಾದ ಅವರು ನಮ್ಮ ಜೊತೆ ಇಲ್ಲದಿದ್ದರು ಅವರು ಕ್ಲಿಕ್ಕಿಸಿದ ಚಿತ್ರ ಇಲ್ಲಿದೆ.

–ಬೀರಣ್ಣ ನಾಯಕ ಮೊಗಟಾ

## ಗಂಗಾ ಭವಾನಿಗೆ ಬೀಗದ ಹರಕೆ

ದೇವರಿಗೆ ಹರಕೆ ಹೊರುವ ಸಂಪ್ರದಾಯವು ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದೆ. ಹೀಗೆ ಹೊರುವ ಹರಕೆಗಳಲ್ಲಿಯೂ ವಿಭಿನ್ನವಾಗಿರುತ್ತವೆ. ಕೆಲವರು ತುಲಾಭಾರ ಸೇವೆಯ ಹರಕೆ ಹೊತ್ತರೆ, ಕೆಲವರು ತಮ್ಮ ಮುಡಿಯನ್ನು ದೇವರಿಗೆ ಸಮರ್ಪಿಸುವ ಹರಕೆ ಹೊರುತ್ತಾರೆ. ಹರಕೆ ರೂಪದಲ್ಲಿ ಮಣ್ಣಿನ ಗೊಂಬೆಗಳನ್ನು ಸ್ವೀಕರಿಸುವ ದೇವಾಲಯವೂ ನಮ್ಮ ರಾಜ್ಯದಲ್ಲಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಪಟ್ಟಣದ 'ನಾರಸಿಂಹ ಪೇಟೆ'ಯಲ್ಲಿರುವ ಗಂಗಾ ಭವಾನಿ ದೇವಿಗೆ ಹೊರುವ ಹರಕೆ ವಿಶಿಷ್ಟವೆನಿಸುತ್ತದೆ. ಇಲ್ಲಿಗೆ ಬರುವ ಭಕ್ತರು ತಮ್ಮ ಇಷ್ಟಾರ್ಥಗಳು ನೆರವೇರಿದರೆ ಬೀಗವನ್ನು ಸಮರ್ಪಿಸುವುದಾಗಿ ಹರಕೆ ಹೊರುವುದು ವಾಡಿಕೆ. ತಮ್ಮ ಕೋರಿಕೆ ನೆರವೇರಿದ ನಂತರ ಭಕ್ತರು ವಿವಿಧ ಗಾತ್ರದ ಬೀಗಗಳನ್ನು ದೇವಿಗೆ ಸಮರ್ಪಿಸುತ್ತಾರೆ. ಹೀಗೆ ಹರಕೆ ಹೊತ್ತ ಭಕ್ತರು ಸಮರ್ಪಿಸಿರುವ ವಿವಿಧ ಗಾತ್ರಗಳ ಅಸಂಖ್ಯಾತ ಬೀಗಗಳನ್ನು ಗರ್ಭಗುಡಿಯ ಬಳಿಯಿರುವ ಜಾಲರಿಗೆ ತೂಗುಹಾಕಿರುವುದನ್ನು ನಾವು ನೋಡಬಹುದು.

–ಕೆ. ಶ್ರೀಧರ, ಚಿಂತಾಮಣಿ

